**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.459/2018**

**CW- 7** **PW:6**

| | |
|---|---|
| ಸಾಕ್ಷಿಯ ಹೆಸರು | ಃ ಮಹೇಶ ಪಾಟೀಲ |
| ತಂದೆ /ಗಂಡನ ಹೆಸರು | ಃ ನೀಲಪ್ಪಗೌಡ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಏನೂ ಇಲ್ಲ |
| ವಾಸಸ್ಥಳ | ಃ ಸೂಡಿ, ರೋಣ ತಾಲೂಕ. |

ದಿಃ **08.01.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ಈ ಮೊದಲು ಮುಥೂಟ್ ಫೈನಾನ್ಸ ಲಿಮಿಟೆಡ್ ನವನಗರದಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ನಾನು ಜೂನಿಯರ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದೆ. ನವೆಂಬರ್ 2011 ರಿಂದ 2013 ವರೆಗೆ ಕಾರ್ಯನಿರ್ವಹಿಸಿದ್ದೆ. ನಾನು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆರೋಪಿ ಕಳ್ಳತನ ಮಾಡಿದ ಬಂಗಾರವನ್ನು ನಮ್ಮ ಫೈನಾನ್ಸದಲ್ಲಿ ಇಟ್ಟು ಸಾಲ ತೆಗೆದುಕೊಂಡಿದ್ದ. ಎಪಿಎಂಸಿ ನವನಗರ ಪೊಲಿಸನವರು ಆರೋಪಿ ಅಡಮಾನ ಇಟ್ಟಿದ್ದ ಬಂಗಾರ ಕಳ್ಳತನವಾಗಿದ್ದು ಅಂತಾ ಹೇಳಿದರು. ಆರೋಪಿಯನ್ನು ಕರೆದುಕೊಂಡು ಬಂದು ಆತ ಅಡ ಇಟ್ಟ ಬಂಗಾರ ಕೊಡಬೇಕು ಅಂತಾ ಹೇಳಿದರು. ನಮ್ಮ ಮ್ಯಾನೇಜರ್ ಶಾಂತಪ್ಪ ಮಲ್ಲ ಸಮುದ್ರ ಇವರು ಮೇಲಾಧಿಕಾರಿಗಳ ಜೊತೆ ಮಾತಾಡಿ ಪರವಾನಿಗೆ ಪಡೆದು ಸ್ವಲ್ಪ ದಿನಗಳ ನಂತರ ಆರೋಪಿ ಅಡ ಇಟ್ಟ ಬಂಗಾರವನ್ನು ಪೊಲಿಸರಿಗೆ ನೀಡಿದರು. ಆರೋಪಿ ತನ್ನ ಹೆಸರಿನಲ್ಲಿ 5 ಲಕ್ಷ ಹಾಗೂ ರಮೇಶ ನರಗುಂದ ಇವರ ಹೆಸರಿನಿಂದ ರೂ 3 ಲಕ್ಷ ಸಾಲ ಪಡೆದಿದ್ದ. ಆರೋಪಿ ತನ್ನದೇ ಬಂಗಾರ ಅಂತಾ ಮತ್ತು ಸಾಲ ಬೇಕಾಗಿದೆ ಅಂತಾ ಹೇಳಿ ಒತ್ತೆ ಇಟ್ಟಿದ್ದ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 23.03.2013 ರಂದು ಕೇಶ್ವಾಪೂರ ಪೊಲಿಸ್ ಠಾಣೆ ಇನ್ಸಪೆಕ್ಟರ ಇವರು ಬಂದು ಈ ವಿಚಾರ ತಿಳಿಸಿದರು ಎಂದರೆ ಸರಿ. ಆರೋಪಿ ಮತ್ತು ರಮೇಶ ನರಗುಂದ ಇವರು ತಾವು ಕಳ್ಳತನ ಮಾಡಿದ ಬಂಗಾರದ ಆಧರಣಗಳು ತಮ್ಮವು ಅಂತಾ ಸುಳ್ಳು ಹೇಳಿ ನಮ್ಮ ಸಂಸ್ಥೆಗೆ ಅಡವಿಟ್ಟು ರೂ 9,08,700/- ಹಣ ಮೋಸ ಮಾಡಿ ಸಾಲ ಪಡೆದಿದ್ದರು ಎಂದರೆ ಸರಿ. ಆರೋಪಿಯ ಖಾತೆಯ ಸಂಖ್ಯೆ 2043 ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಪಾಟಿಸವಾಲಿಗೆ ಸಮಯ ಕೋರಿದ್ದು ರೂ 500/- ವೆಚ್ಚ ವಿಧಿಸಿ ಪರವಾನಿಗೆ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.